ನೀರಿನ ಸಂಗ್ರಹ ಏನಿದೆಯೋ ಅದೆಲ್ಲಾ ಕುಡಿಯ ತೊಡಗಿದನಂತೆ. ಊರು, ಪಟ್ಟಣ, ನಗರ, ಶಹರದ ಜನ ತಮಗೆ ಏನು ನೀರಿನ ಅನುಕೂಲತೆಯನ್ನು ಮಾಡಿಕೊಂಡಿದ್ದರೋ ಅವೆಲ್ಲವನ್ನೂ ಈತ ನಿಧಾನವಾಗಿ ಗಟಗಟನೆ ಕುಡಿಯ ತೊಡಿಗಿದ. ಜನ ಜಾನುವಾರಿಗೆ ನೀರೇ ಇಲ್ಲದಂತೆ ಮಾಡುತ್ತಾನೆ ಅನ್ನುವ ಭೀತಿಯನ್ನು ಜನರಲ್ಲಿ ಹುಟ್ಟಿಸಿದ.

ನಾಳೆಗಾಗಿ ನೀರನ್ನ ಉಳಿಸಿಕೊಳ್ಳಲು ಜನ ಮುಂದಾದರು. ದೇವರಿಂದ ವರ ಪಡೆದ ಜಲ ಕಂಟಕ ಮನಸಿಗೆ ಬಂದಷ್ಟು ನೀರು ಕುಡಿದು ನೀರೇ ಸಿಗದ ಹಾಗೆ ಮಾಡತೊಡಗಿದ. ನೀರಿನ ಅಭಾವದಲ್ಲಿ ಜನ ಇವತ್ತು ವೆಂಕಟ ರಾಯರ ಮನೆ ಬಾವಿ, ಮಾರನೇ ದಿನ ಗೋಪಾಲ ರಾಯರ ಮನೆ, ನಾಡಿದ್ದು ವೆಂಕಟಪ್ಪ ನಾಯಕನ ಬಾವಿ. ನಂತರ, ಸಿದ್ಧರಾಮನ ಏತದ ಬಾವಿ, ನಾಲ್ಕನೇ ದಿನ ರಾಣಿಯ ಅಂತಃಪುರದ ತೆರೆದ ಬಾವಿ... ಹೀಗೆ ನೀರನ್ನು ಲೆಕ್ಕಾಚಾರದಲ್ಲಿ ಬಳಸಿಕೊಳ್ಳ ತೊಡಗಿದರು. ನೋಡ ನೋಡುತ್ತಿರುವಂತೆ ಊರಲ್ಲಿರುವ ಬಾವಿಗಳೆಲ್ಲ ಬತ್ತಿದವು. ದೂರದಿಂದ ನೀರಿಗಾಗಿ ಅಲೆಯುವ ಪರಿಸ್ಥಿತಿ ಬಂತು.

ಜಲಕಂಟಕ ನೀರನ್ನೇ ಕುಡಿದು ಬದುಕ ತೊಡಿಗಿದ. ನಂತರ ಅವನ ಅಭ್ಯಾಸಗಳೂ ಬದಲಾಗಿದ್ದವು. ಆತ ಜಲ ಕ್ರೀಡೆಗೆ ಇಳಿಯುತ್ತಿದ್ದ. ಸಮೃದ್ಧವಾಗಿದ್ದ ನೀರು ನೋಡಿ ಹೂಂಕರಿಸುತ್ತಿದ್ದ. ನೀರ ನಡುವೆ ನಿಂತು ಅಬ್ಬರಿಸುತ್ತಿದ್ದ. ತನ್ನ ಬೊಗಸೆಯಲ್ಲಿ ನೀರನ್ನು ತುಂಬಿ ಕೊಳ್ಳುತ್ತಿದ್ದ. ಒಮ್ಮೆ ಅದನ್ನ ಆಕಾಶಕ್ಕೆ ತೂರಿ ಗಹಗಹಿಸಿ ನಕ್ಕು ನಂತರ ಕೆರೆ ಹಳ್ಳದಲ್ಲಿರುವ ನೀರನ್ನ ಒಂದೊಂದೇ ಬೊಗಸೆ ಕುಡಿಯುತ್ತಿದ್ದ. ಅವನ ಬೊಗಸೆಗಳಿಗೆ ಬಾವಿ– ಕೆರೆ ನೀರೆ ಬರಿದಾಗಿ ಬಿಡುತ್ತಿತ್ತು. ಆ ಬಾವಿ ಬರಿದಾದ ಹಾಗೆ ಇವನ ನೀರಿನ ದಾಹ ಹೆಚ್ಚುತ್ತಿತ್ತು, ಇವನು ಮತ್ತೂ ಕುಡಿಯುತ್ತಿದ್ದ. ತೇಗುತ್ತಿದ್ದ, ಇವನ ನೀರಾಟ ಮುಂದುವರೆಯುತ್ತಿತ್ತು.


ನೀರಿನ ಸ್ಥಿತಿ ಬಿಗಡಾಯಿಸಿ ಜನ ಕಂಗಾಲಾದರು. ಅವರು ಹನಿ ನೀರಿಗೂ ಪರದಾಡುವ ಪರಿಸ್ಥಿತಿ ಬಂತು. ಮಳೆಗಾಲ ದೂರವಿದ್ದಾಗ ಊರು ಮರಭೂಮಿಯಂತಾಯಿತು. ಊರ ಜನ ಊರ ನಾಗರ ಕಟ್ಟೆಯ ಬಳಿ ನೆರೆದರು. ಎಲ್ಲರದ್ದೂ ಒಂದೇ ಪ್ರಶ್ನೆ. ಮುಂದೆ ಏನು ಮಾಡುವುದು? ಊರಿನಲ್ಲಿ ಓರ್ವ ಹಿರಿಯಜ್ಜನಿದ್ದ. ತುಂಬಾ ಒಳ್ಳೆಯವನು ಆ ಅಜ್ಜ. ಮೋಸ ಮಾಡಿ ಅರಿಯದ ಹಿರಿಯಜ್ಜ ದೈವ ಭಕ್ತ. ಊರ ಜನ ಆ ಅಜ್ಜನ ಮೊರೆ ಹೋದರು. ಏನು ಮಾಡುವುದು ಎಂದು ಆತನಲ್ಲಿ ಪರಿಪರಿಯಾಗಿ ಬೇಡಿಕೊಂಡರು.

ಅಜ್ಜ ಬಹಳ ಹೊತ್ತು ಯೋಚಿಸಿ ‘ಈ ಜಲ ರಕ್ಕಸನಿಂದ ನಾವು ತುಂಬಾ ಕಷ್ಟ ಪಡುತ್ತಿದ್ದೇವೆ’ ಎಂದು ಅಜ್ಜ ಎಲ್ಲರ ಮುಖ ನೋಡುತ್ತ ನುಡಿದ.

ಹೌದು. ನಾವು, ನೀರಿಗಾಗಿ ಈವರೆಗೆ ತುಂಬಾ ಕಷ್ಟಪಟ್ಟಿದ್ದೇವೆ. ದೇವರನ್ನು ಬೇಡಿಕೊಂಡಿದ್ದೇವೆ. ನಮ್ಮ ಪ್ರಾರ್ಥನೆ ದೇವರಿಗೆ ಕೇಳಿದೆಯೋ ಇಲ್ಲವೋ ನಮಗೆ ತಿಳಿದಿಲ್ಲ. ಕೊನೆಯದಾಗಿ ಖಾಲಿ ಕೊಡಗಳ ಮೆರವಣಿಗೆ ಮಾಡಿ ದೇವಿ ಚಿಲುಮೆಗೆ ಮಹಾ ಪೂಜೆ ಮಾಡಿದರೆ ದೇವಿಯ ಕೃಪೆ ಸಿಗುತ್ತದೋ ನೋಡೋಣ ಎಂದರು.

ಅಜ್ಜ ಜನರ ಇಚ್ಛೆಯಂತೆ ಸಲಹೆ ನೀಡಿ ಬರೀ ಕೊಡಗಳ ಮೆರವಣಿಗೆಗೆ ಸಜ್ಜುಗೊಳಿಸಿದ. ಕೊಡಪಾನ, ಬಿಂದಿಗೆ, ಹಂಡೆ, ಚೆಂಬು, ತಪ್ಪಲೆ, ಲೋಟ, ಪಾತ್ರೆ, ಹಿತ್ತಾಳೆಯ ಮರಗಿ... ಎಲ್ಲವನ್ನು ಜನ ಹೊರಗೆ ತಂದರು. ಇನ್ನೊಂದು ಕಡೆ ಬರಿದಾದ ಬಾವಿಗಳು, ಕೆರೆಗಳು, ಕುಂಟೆಗಳು ಮೈತೆರೆದು ನಿಂತು ಆಕಾಶವನ್ನೇ ಅಣುಕಿಸಿದವು. ನಾಗರಕಟ್ಟೆಯಲ್ಲಿ ದೇವಿಗೆ ಮಂಗಳಾರತಿಯೂ ನಡೆಯಿತು. ಹಿರಿಯಜ್ಜನ ಕಣ್ಣು ತುಂಬಿಕೊಂಡಿತ್ತು. ಚಿಲುಮೆ ದೇವರಿಗೆ ತನ್ನ ಕೋರಿಕೆಯನ್ನು ಕೇಳಿಕೊಂಡ. ನೆರೆದ ಮಕ್ಕಳು ಹಿರಿಯರು ಕೈ ಮುಗಿದು ಬೇಡಿಕೊಂಡರು.

ಆಗಲೇ ಜಲ ರಕ್ಕಸನಿಗೆ ನೀರನ್ನ ಕುಡಿಯಲಾಗುತ್ತಿಲ್ಲ ಎಂಬ ಅಚ್ಚರಿಯ ಸುದ್ದಿ ಬಂತು. ಜಲ ರಕ್ಕಸನ ಪರಿಸ್ಥಿತಿ ಕೆಟ್ಟು ಹೋಗಿತ್ತು. ಬೊಗಸೆಯಲ್ಲಿ ಎಷ್ಟೇ ನೀರು ಎತ್ತಿ ಕೊಂಡರೂ ಅದು ಬೆರಳ ಸಂದಿಯಿಂದ ಸೋರಿ ಹೋಗುತ್ತಿತ್ತು. ಒಂದೇ ಒಂದು ಗುಟುಕು ನೀರು ಅವನಿಗೆ ದಕ್ಕಲಿಲ್ಲ. ಸಿಟ್ಟಿನಿಂದ ದಿಮಿ ದಿಮಿ ಕುಣಿದ. ಕೂಗಿಕೊಂಡ. ಮೈ ಪರಚಿಕೊಂಡ. ತಲೆಗೂದಲು ಕಿತ್ತುಕೊಂಡು ಕುಣಿದಾಡಿದ. ಆ ಅವಸ್ಥೆಯಲ್ಲಿಯೇ ಅವನ ಅವಸಾನವಾಯಿತು. ಊರ ಬಾವಿಗಳಲ್ಲಿ ನೀರು ಉಕ್ಕಿತು. ಕೆರೆಗಳು ತುಂಬಿ ಕೊಂಡವು. ಹಳ್ಳದಲ್ಲಿ ನೀರು ಹರಿಯಿತು. ದೇವಿ ಚಿಲುಮೆಯಲ್ಲಿ ನೀರು ತುಂಬಿತು. ನಂತರ ಜನ ನೀರಿನ ಬಗ್ಗೆ ನಿರ್ಲಕ್ಷ ತೋರಿಸಲಿಲ್ಲ. ■




# ಧೂರ್ತ ಆಮೆ

■ ನೀ. ಶ್ರೀಶೈಲ ಹುಲ್ಲೂರು

ಹಂಸವೆರಡು ಕೊಳದ ಬಳಿ
ನೀರನರಸಿ ಬಂದವು
ನೀರು ಕುಡಿದು ತಣಿದ ಮೇಲೆ
ಆಮೆ ನೋಡಿ ನಿಂದವು

ಹರಟೆ ಮಲ್ಲ ಆಮೆ ತಾನೆ
ಕೊಳದ ರಾಜನೆಂದಿತು
ಅದನು ಇದನು ಏನೊ ಹೇಳಿ
ಅವುಗಳ ತಲೆ ತಿಂದಿತು

ಸರಿ, ನಾವು ಬರುವೆವಿನ್ನು
ಮತ್ತೆ ಸಿಗುವೆವೆಂದವು
ಬಿಡದ ಆಮೆ ನಡೆಯ ನೋಡಿ
ಮನದಿ ತಾವೆ ನೊಂದವು

ನನಗೆ ಕೊಳದ ಸಂಗ ಸಾಕು
ನದಿಯಲೀಜಬೇಕು
ಹಾಡಿ ಜಿಗಿದು ಕುಣಿದು ತಣಿದು
ಜಲದಿ ತೇಲಬೇಕು

ದಮ್ಮಯ್ಯ ಎನುವೆ ನಾನು
ಮಾಡಿ ನೀವ್ ಉಪಾಯವ
ಏನೆ ಬಂದರೂ ಸರಿಯೆ
ಗೆಲುವೆ ನಾ ಅಪಾಯವ

ಹಂಸವೆರಡು ಬಡಿಗೆ ತಂದು
ಆಚೆ ಈಚೆ ಹಿಡಿದವು
ನಡುವೆ ಆಮೆ ಬಡಿಗೆ ಕಚ್ಚ
ಲೆರಡು ಹಾರಿ ನಡೆದವು

ತುಸು ದೂರ ಸಾಗಿದೊಡನೆ
ಕಂಡಿತೊಂದು ಊರು
ಮಕ್ಕಳೆಲ್ಲ ಆಮೆ ಕಂಡು
ಕೂಗಿದರು ಜೋರು

ಕಲ್ಲನೆಸೆದು ಗೇಲಿ ಮಾಡೆ
ಆಮೆ ಕೋಪ ಸಿಡಿಯಿತು
ಬೈಯ್ಯಲೆಂದು ಬಾಯಿ ತೆರೆಯೆ
ಕೆಳಗೆ ಬಿದ್ದು ಮಡಿಯಿತು

ಹಮ್ಮು ಬಿಮ್ಮು ಬೇಡ ನಮಗೆ
ಬೇಡ ಕೋಪ ತಾಪ
ಮನಗಾಣಿರಿ ಮಕ್ಕಳೆಲ್ಲ
ಅವುಗಳೆಮಗೆ ಶಾಪ

■